ಕಾಲುಗಳೆಲ್ಲ ನಿತ್ರಾಣವಾದವು. ಯಾರೋ ನೆಲಕ್ಕೇ ಕುಸಿದು ಕುಳಿತರು, ಯಾರೋ ಆಕಾಶದತ್ತ ನೋಟ ಹಾಕಿ ನಿಶ್ಶಬ್ದವಾಗಿ ಅತ್ತರು. ಒಂದು ಮನೆಯ ದೀಪ ಒಂದೇ ದಿನದಲ್ಲಿ ಆರಿಬಿಟ್ಟಿತ್ತು.

ಯಾರೋ ಒಬ್ಬರು ಅವಳ ನಿಶ್ಚೇಷ್ಟ ದೇಹವನ್ನು ನಿಧಾನವಾಗಿ ಎತ್ತಿಕೊಂಡು ಅಂತ್ಯಸಂಸ್ಕಾರಕ್ಕೆ ಕೊಂಡೊಯ್ದರು. ಆದರೆ ಅಲ್ಲಿ ಉಳಿದವರ ಹೃದಯಗಳಲ್ಲಿ ಆವರಿಸಿಕೊಂಡಿದ್ದ ಶೋಕಕ್ಕೆ ಯಾವ ವಿಧಿಯೂ ಇರಲಿಲ್ಲ. ಯಾರಿಗೂ ಯಾರನ್ನೂ ಸಮಾಧಾನ ಪಡಿಸುವ ಶಕ್ತಿ ಉಳಿದಿರಲಿಲ್ಲ. ಭರವಸೆಯ ಪದಗಳೇ ಬಾಯಲ್ಲಿ ಒಣಗಿಹೋಗಿದ್ದವು. ಒಂದೇ ಕುಟುಂಬದಂತೆ ನಗುತ್ತಾ ಬದುಕಿದ್ದವರು, ಆ ಕ್ಷಣದಲ್ಲಿ ತಮ್ಮದೇ ಮನೆಯ ಬಾಗಿಲುಗಳ ಭದ್ರತೆಗಾಗಿ ಮೌನವಾಗಿ ಪ್ರಾರ್ಥಿಸುವವರಾಗಿಬಿಟ್ಟಿದ್ದರು. ಇಂತಹ ಅನಿವಾರ್ಯವಾದ ಸ್ವಾರ್ಥದ ಅಂಚಿಗೆ ತಮ್ಮನ್ನು ತಳ್ಳಿಬಿಟ್ಟ ಈ ಯುದ್ಧದ ಮೇಲೆ ಅವರಿಗೆ ಅಸಹ್ಯ ಉಕ್ಕೇರಿತು. ಮನುಷ್ಯತ್ವವನ್ನೇ ಕ್ಷಣಾರ್ಧದಲ್ಲಿ ಮೌನಗೊಳಿಸುವ ಈ ಕ್ರೂರ ವಾಸ್ತವ ಅವರ ಹೃದಯಗಳನ್ನು ಚೂರು ಮಾಡಿತು. ಅಂದು ಯಾವ ಮನೆಯಲ್ಲೂ ದೀಪ ಬೆಳಗಲಿಲ್ಲ, ಊರಿಗೆ ಊರೇ ಮೌನವನ್ನು ಹೊದ್ದು ಮಲಗಿದಂತೆ ಭಾಸವಾಗುತ್ತಿತ್ತು. ಪ್ರತಿಯೊಬ್ಬರ ಜೀವತಂತುವಿನೊಂದಿಗೆ ನಿರ್ದಯವಾಗಿ ಆಟವಾಡುತ್ತಿರುವ ಈ ರಾಕ್ಷಸನ ಕಬಂಧ ಬಾಹುವಿನಿಂದ ಮುಕ್ತಿಗೊಳಿಸಲು ಯಾರಾದರೂ ಬರಬಾರದೇ ಎಂದು ಅಲ್ಲೊಬ್ಬಳು ತಾಯಿ ಅಳುತ್ತಿದ್ದಳು. ತಾಯಿಯ ಮಡಿಲಲ್ಲಿ ಅರಳಿದ ಕನಸುಗಳನ್ನು, ಮನೆಬಾಗಿಲಿನ ನಿರೀಕ್ಷೆಯನ್ನು, ಮಕ್ಕಳ ನಗುವನ್ನು ನಿಧಾನವಾಗಿ ನುಂಗುವ ಈ ದಾಹಿ ಬೆಂಕಿ ಊರಿಗೆ ಊರನ್ನೇ ಬಲಿ ತೆಗೆದುಕೊಂಡರೆ ಎಂಬ ಭಾವನೆಯಲ್ಲಿ ಬಳಲಿದರು.

ಕಿಮ್ ದುಃಖವನ್ನು ತಾಳಲಾರದೇ ಮಗನ ಕೋಣೆಗೆ ಹೋಗಿ ಆತನ ಹಳೆಯ ಅಂಗಿಯನ್ನು ಎದೆಗೆ ತಬ್ಬಿಕೊಂಡಳು. ಬಟ್ಟೆಯಲ್ಲಿ ಅಂಟಿಕೊಂಡಿದ್ದ ಮಣ್ಣಿನ ವಾಸನೆ ಅವನ ಬಾಲ್ಯವನ್ನು ನೆನಪಿಸಿತು. ಮಳೆ ಬಂದ ಒಂದು ದಿನ. ಚಿಕ್ಕವನಾಗಿದ್ದಾಗ ಮಣ್ಣಿನಲ್ಲಿ ಆಟವಾಡಿ ಸಂಪೂರ್ಣ ಒದ್ದೆಯಾಗಿದ್ದ. ಅವಳು ಕೋಪದಿಂದ 'ಎಷ್ಟು ಸಲ ಹೇಳಿದ್ದೇನೆ?' ಎಂದು ಗದರಿಸಿದ್ದಳು. ಅವನು ಕಣ್ಣು ಮಿಟುಕಿಸಿ ನಗುತ್ತಾ 'ಮಣ್ಣಿಲ್ಲದ ಆಟ ಆಟವಾ ಅಮ್ಮಾ?' ಎಂದು ಕೇಳಿದ್ದ. ಆ ಕ್ಷಣದಲ್ಲಿ ಅವಳ ಕೋಪವೇ ಕರಗಿಹೋಗಿತ್ತು.

ಅವನು ತುಂಟತನದ ಪ್ರತಿರೂಪ. ಮನೆಮೆಟ್ಟಿಲಿನ ಮೇಲೆ ಕತ್ತಿಯ ಬದಲಿಗೆ ಮರದ ಕಡ್ಡಿ ಹಿಡಿದು 'ನಾನು ಯೋಧ!' ಎಂದು ಕೂಗುತ್ತ ಓಡಾಡುತ್ತಿದ್ದ. ಕೆಲವೊಮ್ಮೆ ತನ್ನ ತಂಗಿಯನ್ನು 'ರಾಜಕುಮಾರಿ' ಎಂದು ಕರೆಯುತ್ತಾ, ತಾನೇ ಅವಳ ರಕ್ಷಕನಂತೆ ನಿಂತುಕೊಳ್ಳುತ್ತಿದ್ದ. ಕಾಡಿನೊಳಗೆ ಗೆಳೆಯರೊಂದಿಗೆ ಓಡಾಡಿ, ಕುಸ್ತಿ ಆಡುತ್ತ, ಚಿಕ್ಕಚಿಕ್ಕ ಗಾಯಗಳನ್ನೇ ಹೆಮ್ಮೆಯಿಂದ ತೋರಿಸುತ್ತಿದ್ದ. 'ನೋಡು ಅಮ್ಮಾ, ಇಂದು ಆಟವಾಡುವಾಗ ರಕ್ತ ಬಂತು. ನಾನು ಬಲಶಾಲಿ!' ಎಂದು ಎದೆ ತಟ್ಟಿ ನಗುತ್ತಿದ್ದನು. ಆ

